RNU AIR DHARWAD

SEPTEMBER 13, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- 'ನಾಗರಿಕ ಸಹಭಾಗಿತ್ವ ಮತ್ತು ಆಡಳಿತದಲ್ಲಿ, ಕೃತಕ ಬುದ್ಧಿಮತ್ತೆಯ ಮಾರ್ಗ', ಧ್ಯೇಯದಡಿ, ಪ್ರಜಾಪ್ರಭುತ್ವ ದಿನಾಚರಣೆಗೆ, ರಾಜ್ಯಾದ್ಯಂತ ಸಿದ್ಧತೆ.
- ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ; ರಾಜ್ಯದಿಂದ 4 ಲಕ್ಷ ಫಲಾನುಭವಿಗಳು ಆಯ್ಕೆ – ಶೋಭಾ ಕರಂದ್ಲಾಜೆ.
- ಸಂಪೂರ್ಣತಾ ಅಭಿಯಾನ; ಉತ್ತರಕನ್ನಡ ಜಿಲ್ಲೆಯ, ಆಶೋತ್ತರ ತಾಲೂಕು ಜೊಯಿಡಾದಲ್ಲಿ, ಜನ ಜಾಗ್ರತಿ.
- ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲೂಕು ರಾರಾವಿಯಲ್ಲಿ, ಅಪರೂಪದ ದೊರವಾಯನ ಹಕ್ಕಿ ಪತ್ತೆ.

<><><>

ಈಗ ವಾರ್ತೆಗಳ ವಿವರ

<><><>

'ನಾಗರಿಕ ಸಹಭಾಗಿತ್ವ ಮತ್ತು ಆಡಳಿತದಲ್ಲಿ, ಕೃತಕ ಬುದ್ಧಿಮತ್ತೆಯ ಮಾರ್ಗ' ಎಂಬ ಧ್ಯೇಯದಡಿ, ನಾಡಿದ್ದು, 15ನೇಯ ತಾರೀಖು, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಗುತ್ತಿದೆ. ಬೀದರ ನಿಂದ ಚಾಮರಾಜನಗರದ ವರೆಗೆ, ಎರಡೂವರೆ ಸಾವಿರ ಕಿಲೋ ಮೀಟರ್ ಉದ್ದದ ಮಾನವ ಸರಪಳಿ ನಿರ್ಮಿಸಿ, ಸಂವಿಧಾನ ಪೀಠಿಕೆ ಓದುವ ಯೋಜನೆ ರಾಜ್ಯ ಸರ್ಕಾರ ರೂಪಿಸಿದೆ.

<><><>

ಉತ್ತರಕನ್ನಡ ಜಿಲ್ಲೆಯ ಮಾನವ ಸರಪಳಿಯಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ, ರಾಜ್ಯ ಸರ್ಕಾರದಿಂದ 'ಪ್ರಶಂಸಾಪತ್ರ'ವನ್ನು ನೀಡಲು ಯೋಜಿಸಲಾಗಿದೆ. ಭಾಗವಹಿಸಿದವರ ಭಾವಚಿತ್ರವನ್ನು ಪ್ರಮಾಣಪತ್ರದಲ್ಲಿ ಮುದ್ರಿಸಲು, ಅವಕಾಶ ನೀಡಲಾಗಿದೆ. www.democracy'day'karnataka.in ನಲ್ಲಿ, ಹೆಸರು ನೋಂದಾಯಿಸಲು, ಕೋರಲಾಗಿದೆ.

<><><>

‘ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ’ ಹಿನ್ನೆಲೆ, ಮಾನವ ಸರಪಳಿ ಕಾರ್ಯಕ್ರಮದಲ್ಲಿ, ಸಾರ್ವಜನಿಕರು ಭಾಗವಹಿಸುವಂತೆ ಉತ್ತೇಜಿಸಲು, ಉಡುಪಿಯ ಕುಂಜಾರುಗಿರಿಯಲ್ಲಿ ಜಿಲ್ಲಾಡಳಿತ ಚಾರಣ ಆಯೋಜಿಸಿ, ಗಮನ ಸೆಳೆದಿದೆ.

<><><>

ಪ್ರಜಾಪ್ರಭುತ್ವ ದಿನಾಚರಣೆಯ ಮಾನವ ಸರಪಳಿ ಕಾರ್ಯಕ್ರಮದ, ಭಿತ್ತಿಚಿತ್ರಗಳನ್ನು ವಿಧಾನ ಪರಿ ’ತ್ ಸದಸ್ಯ, ಎಸ್.ವಿ.ಸಂಕನೂರ ಗದಗನಲ್ಲಿ ಬಿಡುಗಡೆಗೊಳಿಸಿದರು.

<><><>

ಬೆಳಗಾವಿ ಜಿಲ್ಲೆಯಾದ್ಯಂತ 145 ಕಿಲೋ ಮೀಟರ್ ಉದ್ದದ ಮಾನವ ಸರಪಳಿ ನಿರ್ಮಿಸಿ, ಸಂವಿಧಾನದ ಮಹತ್ವ ಕುರಿತು, ಜನ ಜಾಗ್ರತಿ ಮೂಡಿಸಲು ಸಿದ್ಧತೆ ಕೈಗೊಳ್ಳಲಾಗಿದೆ ಎಂದು, ಜಿಲ್ಲಾಧಿಕಾರಿ ಮೊಹಮ್ಮದ್ ರೋ ’ನ್ ತಿಳಿಸಿದ್ದಾರೆ.

<><><>

ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ ಅಡಿ, ರಾಜ್ಯದಿಂದ 4 ಲಕ್ಷ ಫಲಾನುಭವಿಗಳು ಆಯ್ಕೆಯಾಗಿ, 41 ಸಾವಿರ ಜನರಿಗೆ ಸಾಲ ಸೌಲಭ್ಯ ದೊರೆತಿದೆ ಎಂದು, ಕೇಂದ್ರದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ರಾಜ್ಯ ಖಾತೆ ಸಚಿವರಾದ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿಸಿದ್ದ, ರಾಜ್ಯ ಮಟ್ಟದ ಪಿ.ಎಂ. ವಿಶ್ವಕರ್ಮ ಪ್ರದರ್ಶನ ಮತ್ತು ವ್ಯಾಪಾರ ಮೇಳವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಪಿ.ಎಂ. ವಿಶ್ವಕರ್ಮ ಯೋಜನೆಗೆ, ರಾಜ್ಯದಿಂದ 29 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಮೊದಲ ಹಂತದಲ್ಲಿ 17 ಲಕ್ಷ, ಎರಡನೇ ಹಂತದಲ್ಲಿ 7 ಲಕ್ಷ ಅರ್ಜಿಗಳ ಪರಿಶೀಲನೆ ಪೂರ್ಣಗೊಂಡಿದೆ. ಇದೇ 20 ರಂದು ಪ್ರಧಾನಮಂತ್ರಿ ಅವರು ದೇಶಾದ್ಯಂತ, 20 ಲಕ್ಷ ಫಲಾನುಭವಿಗಳಿಗೆ ಪ್ರಮಾಣಪತ್ರ ವಿತರಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಬೆಂಗಳೂರಿನಲ್ಲಿ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮದ ಕ್ಯಾಂಪಸ್‌ನ್ನು ಸ್ಥಾಪಿಸಿ, ಅಂತಾರಾಷ್ಟ್ರೀಯ ಗುಣಮಟ್ಟದ ತರಬೇತಿ ನೀಡಲು ಕೇಂದ್ರ ಸರ್ಕಾರ ಸಿದ್ಧವಿದೆ. ಬೆಂಗಳೂರಿನ ವಿಶ್ವನೀಡಂ ಪ್ರದೇಶದಲ್ಲಿ, ಹವಾಮಾನ ಮುನ್ಸೂಚನೆ ನೀಡುವ, ಅತ್ಯಾಧುನಿಕ ಡಾಪ್ಲರ್ ಸ್ಥಾಪನೆಗೆ ಸ್ಥಳ ಪರಿಶೀಲನೆ ನಡೆಯುತ್ತಿದೆ ಎಂದರು.

<><><>

ಕೇಂದ್ರದ ನೀತಿ ಆಯೋಗ ಸಂಚಾಲಿತ, ಸಂಪೂರ್ಣತಾ ಅಭಿಯಾನದಡಿ, ಮಹತ್ವಾಕಾಂಕ್ಷಿ ಉತ್ತರಕನ್ನಡ ಜಿಲ್ಲೆಯ, ಆಶೋತ್ತರ ತಾಲೂಕುಗಳಾಗಿ ಮುಂಡಗೋಡ ಮತ್ತು ಜೊಯಿಡಾ-ಸುಪಾ ಆಯ್ಕೆಯಾಗಿವೆ. ಕಳೆದ 58 ದಿನಗಳಿಂದ, 6 ಪ್ರಮುಖ ಮಾನದಂಡಗಳ ಅಡಿ, ನೂರರಷ್ಟು ಪ್ರಗತಿ ದಾಖಲಿಸಲು, ಜೊಯಿಡಾ ತಾಲೂಕಿನಲ್ಲಿ ಜನ ಜಾಗ್ರತಿ ಅಭಿಯಾನ ನಡೆಯುತ್ತಿದೆ. ಈ ತಿಂಗಳಾಂತ್ಯದ ವರೆಗೆ, 90 ದಿನಗಳ ಕಾಲ ಆಯೋಜಿತ ಈ ಆಂದೋಲನದಡಿ, ತಾಯಿ ಮತ್ತು ಮಗುವಿನ ಆರೈಕೆಗಾಗಿ ಕೈಗೊಳ್ಳಲಾದ ಕ್ರಮಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಜೊಯಿಡಾ ತಾಲೂಕು ಶಿಶು ಅಭಿವೃದ್ಧಿ ಯೋಜನೆ ಮೇಲ್ವಿಚಾರಕಿ ಕಲ್ಪನಾ.

<><><>

ಶಿಶು ಅಭಿವೃದ್ಧಿ ಯೋಜನೆ ಮೇಲ್ವಿಚಾರಕಿ ಕಲ್ಪನಾ ಧ್ವನಿ 50 ಸೆಕೆಂಡುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

'ಮುಡಾ' ಪ್ರಕರಣ ಸಂಬಂಧ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ಕ್ರಮ ಪ್ರಶ್ನಿಸಿ, ಸಲ್ಲಿಸಿರುವ ಅರ್ಜಿ ಸಂಬಂಧ, ರಾಜ್ಯ ಉಚ್ಚ ನ್ಯಾಯಾಲಯ, ತನ್ನ ತೀರ್ಪು ಕಾಯ್ದಿರಿಸಿದೆ. ಸಿದ್ದರಾಮಯ್ಯ ಅವರು ಸಲ್ಲಿಸಿರುವ ಅರ್ಜಿ ಕುರಿತು, ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ, ಏಕ ಸದಸ್ಯ ಪೀಠ, ನಿನ್ನೆ ಸುಮಾರು ಐದು ತಾಸು ದೀರ್ಘ ವಾದ ಮತ್ತು ಪ್ರತಿವಾದ ಆಲಿಸಿ, ವಿಚಾರಣೆಯನ್ನು ಮುಕ್ತಾಯಗೊಳಿಸಿತು. ರಾಜ್ಯಪಾಲರ ಅನುಮತಿ ಆಧರಿಸಿ, ಮುಖ್ಯಮಂತ್ರಿ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳುವಂತಿಲ್ಲ ಎಂಬ ಮಧ್ಯಂತರ ಆದೇಶವನ್ನು, ನ್ಯಾಯಾಲಯ, ಮುಂದುವರಿಸಿದೆ.

<><><>

ಗ್ರೇಟ್ ಇಂಡಿಯನ್ ಬಸ್ಟರ್ಡ್, ದೊರವಾಯನ ಹಕ್ಕಿ ಅಥವಾ ಎರ್ಲಡ್ಡು, ಸ್ಥಳೀಯ ಹೆಸರು ಎರೆಭೂತಗಳು, ಅಳಿವಿನ ಅಂಚಿನಲ್ಲಿದೆ. ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲೂಕು ರಾರಾವಿ ಸುತ್ತಮುತ್ತಲ ಗ್ರಾಮಗಳಲ್ಲಿ, ಸದ್ಯ ಒಂದು ಗಂಡು ಮತ್ತು ಒಂದು ಹೆಣ್ಣು ಎರ್ಲಡ್ಡು ಹಕ್ಕಿ ಮಾತ್ರ, ಅಪರೂಪಕ್ಕೆ ಕಾಣಸಿಕ್ಕಿವೆ. 14 ಚದರ ಕಿಲೋ ಮೀಟರ್ ಭೂಮಿಯನ್ನು, ಗ್ರೇಟ್ ಇಂಡಿಯನ್ ಬಸ್ಟರ್ಡ್ ಅಭಯಾರಣ್ಯ ಎಂದು ಸರ್ಕಾರ ಈಗಾಗಲೇ ಘೋಷಿಸಿದೆ. ಅರಣ್ಯ ಇಲಾಖೆಯ ಬಳ್ಳಾರಿ ವಿಭಾಗ, ದೊರವಾಯನ ಹಕ್ಕಿಗೆ ಜಿ.ಪಿ.ಎಸ್. ಟ್ಯಾಗ್ ಮಾಡಲು, ಅವಕಾಶ ನೀಡುವಂತೆ, ಸರಕಾರಕ್ಕೆ ಮನವಿ ಮಾಡಿದೆ. ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಬಳ್ಳಾರಿ ಜಿಲ್ಲೆ ವನ್ಯಜೀವಿ ಕ್ಷೇಮಪಾಲಕ ಡಾಕ್ಟರ್ ಎಸ್.ಕೆ.ಅರುಣ್.

<><><>

ವನ್ಯಜೀವಿ ಕ್ಷೇಮಪಾಲಕ ಡಾಕ್ಟರ್ ಎಸ್.ಕೆ.ಅರುಣ್ ಧ್ವನಿ 50 ಸೆಕೆಂದುಗಳು

<><><>

ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಸುರಕ್ಷತೆ ಖಾತ್ರಿ ಪಡಿಸಲು, ಮಕ್ಕಳ ರಕ್ಷಣಾ ನೀತಿ 2016ನ್ನು ಜಾರಿಗೊಳಿಸಲಾಗಿದೆ. ಮಕ್ಕಳ ಸಹಾಯವಾಣಿ 1–0–9–8 ಕ್ಕೆ ದಾಖಲಾಗುವ ದೂರುಗಳನ್ನು, ಗಂಭೀರವಾಗಿ ಪರಿಗಣಿಸಲಾಗುತ್ತಿದೆ ಎಂದು, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ, ಶೇಖರಗೌಡ ರಾಮತ್ನಾಳ, ಹಾವೇರಿಯಲ್ಲಿ ತಿಳಿಸಿದ್ದಾರೆ. ಹಾವೇರಿ ಜಿಲ್ಲೆ ಬ್ಯಾಡಗಿಯ, ರಾಣಿ ಚನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಶಾಲೆಯ ಪ್ರಾಂಶುಪಾಲ, ವಾರ್ಡನ್ ಹಾಗೂ ಶುಶ್ರೂ 'ಕಿಗೆ ನೋಟೀಸ್ ನೀಡಲಾಗುವುದು. ಪೊಲೀಸ್ ತನಿಖೆ ಮುಂದುವರೆದಿದ್ದು, ಆಯೋಗ ಕಠಿಣ ಕ್ರಮಗಳನ್ನು ಕೈಗೊಳ್ಳಲಿದೆ ಎಂದರು. ಹಾವೇರಿ ಜಿಲ್ಲೆಯಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕರ ಪತ್ತೆಗೆ, ತೆಹಸೀಲ್ದಾರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ, ಆಯೋಗಕ್ಕೆ ಕಾಲಮಿತಿಯಲ್ಲಿ ವರದಿ ಸಲ್ಲಿಸುವಂತೆ ಸೂಚಿಸಿದ್ದಾಗಿ, ರಾಮತ್ನಾಳ ಹೇಳಿದರು.

<><><>

ರಾಯಚೂರ ಜಿಲ್ಲೆ, ಮಾನ್ವಿ ತಾಲೂಕಿನ ಕಪಗಲ್ ಗ್ರಾಮದ ಬಳಿ ಸಂಭವಿಸಿದ, ಶಾಲಾ ಬಸ್ ಅಪಘಾತದಲ್ಲಿ ಗಾಯಗೊಂಡಿದ್ದ ವಿದ್ಯಾರ್ಥಿಯನ್ನು, ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಶರಣ ಪ್ರಕಾಶ್ ಪಾಟೀಲ ಸೂಚನೆ ಮೇರೆಗೆ, ಬೆಂಗಳೂರಿನ ವಿಕ್ಟೋರಿಯಾ ಟ್ರೌಮಾ ಮತ್ತು ತುರ್ತು ಚಿಕಿತ್ಸೆ ಆಸ್ಪತ್ರೆಗೆ ಸ್ಥಳಾಂತರಿಸಿ, ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಸಚಿವರು ಆಸ್ಪತ್ರೆಗೆ ಭೇಟಿ ನೀಡಿ, ವಿದ್ಯಾರ್ಥಿಯ ಯೋಗ ಕ್ಷೇಮ ವಿಚಾರಿಸಿದರು.

<><><>

ಬೀದರ ಜಿಲ್ಲೆ, ಭಾಲ್ಕಿಯ ಹಿರಿಯ ಸಾಹಿತಿ ಜಿ.ಬಿ.ವಿಸಾಜೆ ನಿನ್ನೆ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು. ಭಾಲ್ಕಿಯ ಸ್ವ ಗೃಹದಲ್ಲಿ ಇಂದು ಮಧ್ಯಾಹ್ನ 1 ಗಂಟೆಯ ವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಇಂದು ಮಧ್ಯಾಹ್ನ ಪಾರ್ಥಿವ ಶರೀರದ ಅಂತ್ಯಕ್ರಿಯೆ ಭಾಲ್ಕಿಯಲ್ಲಿ ನಡೆಯಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮಂಡ್ಯ ವಿಶ್ವವಿದ್ಯಾಲಯದ, ಮೊದಲನೇ ಘಟಿಕೋತ್ಸವ, ಇಂದು, ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಜರುಗಲಿದೆ. ಮೂವರು ಗಣ್ಯರಿಗೆ ರಾಜ್ಯಪಾಲರು ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ.

<><><>

ಮೈಸೂರಿನಲ್ಲಿ, ಅಕ್ಟೋಬರ್ 3 ರಿಂದ 12ರ ವರೆಗೆ, ದಸರಾ ಉತ್ಸವಗಳು ನಡೆಯಲಿವೆ. ಪ್ರವಾಸೋದ್ಯಮ ಇಲಾಖೆ, 'ಡಿಸ್ಕವರ್ ಮೈಸೂರು', ಪ್ರಚಾರ ಅಭಿಯಾನ ಪ್ರಾರಂಭಿಸಿದೆ.

<><><>

ಪದ್ಮ ವಿಭೂಷಣ ಪಂಡಿತ ಮಲ್ಲಿಕಾರ್ಜುನ ಮನ್ಸೂರ ಅವರ ಪುಣ್ಯತಿಥಿ ನಿಮಿತ್ತ, ಹುಬ್ಬಳ್ಳಿ ಧಾರವಾಡ ಪಾಲಿಕೆ ಮೇಯರ್ ರಾಮಪ್ಪ ಬಡಿಗೇರ, ಕಲಾ ಭವನದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಗೌರವಾರ್ಪಿಸಿದರು.

<><><>

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲೂಕು ತಾವರಗೇರೆಯ, ಯುವ ಚಿತ್ರ ಕಲಾವಿದ ಸಂತೋಷ ಪತ್ತಾರ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ, ಚಿತ್ತಾರ ಚೇತನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

<><><>

ಧಾರವಾಡ ರಂಗಾಯಣದಲ್ಲಿ, ರಾಷ್ಟ್ರೀಯ ಸಂತ ಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಹಕಾರದಲ್ಲಿ, ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕುರಿತ, ಸಮಾಲೋಚನಾ ಗೋಷ್ಠಿ, ಇಂದು ಬೆಳಗ್ಗೆ 10.30ಕ್ಕೆ ಆಯೋಜಿತವಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ನಾಗರಿಕ ಸಹಭಾಗಿತ್ವ ಮತ್ತು ಆಡಳಿತದಲ್ಲಿ, ಕೃತಕ ಬುದ್ಧಿಮತ್ತೆಯ ಮಾರ್ಗ', ಧ್ಯೇಯದಡಿ, ಪ್ರಜಾಪ್ರಭುತ್ವ ದಿನಾಚರಣೆಗೆ, ರಾಜ್ಯಾದ್ಯಂತ ಸಿದ್ಧತೆ.
- ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ; ರಾಜ್ಯದಿಂದ 4 ಲಕ್ಷ ಫಲಾನುಭವಿಗಳು ಆಯ್ಕೆ – ಶೋಭಾ ಕರಂದ್ಲಾಜೆ.
- ಸಂಪೂರ್ಣತಾ ಅಭಿಯಾನ; ಉತ್ತರಕನ್ನಡ ಜಿಲ್ಲೆಯ, ಆಶೋತ್ತರ ತಾಲೂಕು ಜೊಯಿಡಾದಲ್ಲಿ, ಜನ ಜಾಗ್ರತಿ.
- ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲೂಕು ರಾರಾವಿಯಲ್ಲಿ, ಅಪರೂಪದ ದೊರವಾಯನ ಹಕ್ಕಿ ಪತ್ತೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ